**ಡಾಕ್ಟರ್:** ನಾಳೆ ನೀವು ನಿಮ್ಮ ಕುಟುಂಬದವರನ್ನು ನೋಡಬಹುದು.
**ರೋಗಿ:** ಆದರೆ ಅವರ್ಯಾರೂ ಈಗ ಬದುಕಿಲ್ಲ.
**ಡಾಕ್ಟರ್:** ಗೊತ್ತು. ಅದಕ್ಕೆ ಹಾಗೆ ಹೇಳಿದ್ದು.

***

**ಹೆಂಡತಿ:** ಲಡ್ಡು ತಿನ್ನಲಿಕ್ಕೆ ಸ್ಪೂನ್ ಯಾಕ್ರೀ ನಿಮಗೆ?
**ಗಂಡ:** ಡಾಕ್ಟ್ರು ನನಗೆ ಸ್ವೀಟ್ ಮುಟ್ಟಬಾರದು ಅಂತ ಹೇಳಿದ್ದಾರೆ.

***

**ಮಗು:** ಅಪ್ಸರೆಯರು ಸ್ವರ್ಗದಲ್ಲಿ ತಾನೇ ಇರೋದು.
**ಅಮ್ಮ:** ಹೌದು ಪುಟ್ಟ. ಯಾಕೆ?
**ಮಗು:** ಆದ್ರೆ ಪಕ್ಕದ್ಮನೆ ಆಂಟಿ ಇನ್ನೂ ಇಲ್ಲೇ ಇದ್ದಾರೆ.
**ಅಮ್ಮ:** ಅವಳನ್ನು ಅಪ್ಸರೆ ಅಂದಿದ್ದು ಯಾರು?
**ಮಗು:** ಮೊನ್ನೆ ಅಪ್ಪ ಹೇಳ್ತಿದ್ರು, 'ನೀನು ಅಪ್ಸರೆ ತರಾನೇ ಕಾಣ್ತೆ' ಅಂತ. ಹಾಗಿದ್ರೆ ಇನ್ನೂ ಯಾಕೆ ಸ್ವರ್ಗಕ್ಕೆ ಹೋಗಿಲ್ಲ?
**ಅಮ್ಮ:** ಈಗ ಹೋಗ್ತಾಳೆ. ಜೊತೆಗೆ ನಿನ್ನ ಅಪ್ಪನೂ.

***

**ಹೆಂಡತಿ:** ರೀ..., ಮಗಳು ಬೆಳೆದು ನಿಂತಿದ್ದಾಳೆ. ಬೇಗ ವರ ನೋಡಿ ಮದುವೆ ಮಾಡಬಾರದೇ?
**ಗಂಡ:** ನನಗೂ ಆ ಜವಾಬ್ದಾರಿ ಇದೆ. ಆದರೆ ಯೋಗ್ಯ ವರ ಸಿಗ್ಬೇಕಲ್ಲಾ?
**ಹೆಂಡತಿ:** ಅಯ್ಯೋ, ನನ್ನಪ್ಪನೂ ಯೋಗ್ಯ ವರ ಸಿಗಲಿ ಅಂತ ಕಾಯ್ಕೊಂಡಿದ್ರೆ ನನ್ನ ಮದುವೆ ಆಗ್ತಾ ಇತ್ತೇನ್ರಿ.

***

'ನಿಮ್ಮನ್ನು ಕಟ್ಟಿಕೊಂಡು ತಪ್ಪು ಮಾಡಿದೆ. ಒಂದು ದಿನವಾದರೂ ಸುಖ ಪಡಲಿಲ್ಲ' ಎಂದು ಹೆಂಡತಿ ಗಂಡನ ಬಳಿ ಕಿರುಚಾಡಿದಳು. ಏನೂ ಮಾತಾಡದೆ ಸುಮ್ಮನಿದ್ದ ಗಂಡ, 'ನೀನು ತುಂಬಾ ಸುಂದರವಾಗಿದ್ದೀಯ' ಅಂದ. ತಕ್ಷಣ ಜಗಳ ನಿಂತಿತು. ಹೆಂಡತಿ ಎರಡೆರಡು ಬಾರಿ ಕನ್ನಡಿ ನೋಡಿ ಬಂದಳು. ಬಳಿಕ ಗಂಡನಿಗೆ ಮಸಾಲೆ ದೋಸೆ, ಕೇಸರಿಬಾತ್ ಸಮಾರಾಧನೆ ಆಯಿತು. ಅದಕ್ಕೆ ಹೇಳುವುದು, 'ನಾವು ಹೋರಾಡಬೇಕಿರುವುದು ರೋಗದ ವಿರುದ್ಧವೇ ಹೊರತು ರೋಗಿಯ ವಿರುದ್ಧವಲ್ಲ' ಅಂತ.

**ಮಗ:** ಅಮ್ಮಾ, ಇವತ್ತೂ ಉಪ್ಪಿಟ್ಟಾ?
**ಅಮ್ಮ:** ಈ ಧಿಮಾಕ್ಕೆಲ್ಲಾ ಮದುವೆ ಆದ್ಮೇಲೆ ನಿನ್ನ ಹೆಂಡತಿಯ ಮುಂದೆ ಇಟ್ಕೊ.
**ಗಂಡ:** ಏನೇ ಇವತ್ತೂ ಉಪ್ಪಿಟ್ಟಾ?
**ಹೆಂಡತಿ:** ಈ ಧಿಮಾಕ್ಕೆಲ್ಲಾ ನಿಮ್ಮಮ್ಮನತ್ರ ಇಟ್ಕೊಳ್ಳಿ.
**ಗಂಡ:** ಸರಿ ಕಣೆ.

***

**ಮೇಷ್ಟ್ರು:** ಗುಂಡ, ಕರಡಿಯ ಮೈತುಂಬಾ ಕೂದಲು ಏಕೆ ಇರುತ್ತೆ ಹೇಳು?
**ಗುಂಡ:** ಕಾಡಿನಲ್ಲಿ ಕಟ್ಟಿಂಗ್ ಶಾಪ್ ಇರಲ್ವಲ್ಲ ಸಾರ್!

***

**ಪ್ರಶ್ನೆ:** ದೇವರು ಇದ್ದಕ್ಕಿದ್ದ ಹಾಗೆ ಕಣ್ಮುಂದೆ ಬಂದರೆ?




ಆ ವೇಳೆಗೆ ನಮ್ಮ ಜನ ಪ್ರಜ್ಞಾವಂತರಾಗಿರುತ್ತಾರೆ ಅಂತೀರಾ?!.

**ಉತ್ತರ:** ಮೊದಲು ಕನ್ಫರ್ಮ್ ಮಾಡಿಕೊಳ್ಳಬೇಕು. ದೇವರು ನಮ್ಮ ಹತ್ರ ಬಂದಿದ್ದಾರಾ ಅಥವಾ ನಾವೇ ದೇವರ ಹತ್ರ ಹೋಗಿದ್ದೀವಾ ಅಂತ.

***

**ರೋಗಿ:** ರಾತ್ರಿ ಮಲಗಿದಾಗ ಮಂಚದ ಕೆಳಗೆ ಯಾರೋ ಇದ್ದಾರೆ ಅನ್ನಿಸುತ್ತೆ. ನೋಡಿದ್ರೆ ಯಾರೂ ಇರಲ್ಲ.
**ಡಾಕ್ಟರ್:** ಇದನ್ನು 'ಅಂಡರ್ ಕಾಟ್ ಡಿಸಾಸ್ಟರ್' ಅಂತ ಕರೆಯುತ್ತಾರೆ. ನೀವು ಆಗಾಗ್ಗೆ ಬರಬೇಕಾಗುತ್ತೆ.
**ರೋಗಿ:** ಫೀಸ್?
**ಡಾಕ್ಟರ್:** ಒಂದು ಸಲಕ್ಕೆ ಐನೂರು ರೂಪಾಯಿಗಳು.
**ರೋಗಿ:** ಓಕೆ ಸರ್, ಬರ್ತೀನಿ.
ಕೆಲ ದಿನಗಳ ನಂತರ ರೋಗಿ ಡಾಕ್ಟರ್‌ಗೆ ಎದುರಾದ.
**ಡಾಕ್ಟರ್:** ಯಾಕೆ, ನೀವು ಚಿಕಿತ್ಸೆಗೆ ಬರಲೇ ಇಲ್ಲ?
**ರೋಗಿ:** ಗೆಳೆಯನ ಬಳಿ ನನ್ನ ಕಷ್ಟ ಹೇಳಿಕೊಂಡೆ. ಅದಕ್ಕೆ ಅವನು ಒಂದು ಒಳ್ಳೆಯ ಸಲಹೆ ಕೊಟ್ಟ.
**ಡಾಕ್ಟರ್:** ಏನಂತ ಸಲಹೆ ಕೊಟ್ಟ?
**ರೋಗಿ:** ಮಂಚ ಮಾರಿ, ಚಾಪೆ ಹಾಸಿಕೊಂಡು ಮಲ್ಕೊ ಅಂತ.

***

**ಹೆಂಡತಿ:** ರೀ..., ನಿಮ್ಮ ಗೆಳೆಯ ಮದುವೆ ಆಗ್ತಿರೋ ಹುಡ್ಗಿ ಚೆನ್ನಾಗಿಲ್ಲ. ನೀವಾದರೂ ಹೇಳಬಾರದಾ.
**ಗಂಡ:** ನಾನ್ಯಾಕೆ ಹೇಳಲಿ? ನಾನು ಮದ್ವೆ ಆಗೋವಾಗ ಬಡ್ಡಿಮಗ ಸುಮ್ನೇನೆ ಇದ್ದ.
**ಆತ:** ಸರ್, ನಾನು 'ಥಿನ್' ಆಗಬೇಕು ಅಂದ್ರೆ ಏನು ಮಾಡಬೇಕು?
**ಈತ:** ಜಾಸ್ತಿ 'ತಿನ್' ಬಾರದು ಅಷ್ಟೇ.

***

**ಜಡ್ಜ್:** ನೀನು ನಿನ್ನ ಹೆಂಡತಿಯನ್ನು ಮಾರಿದಿಯಂತೆ.
**ತಿಮ್ಮ:** ಹೌದು ಸ್ವಾಮಿ. ಹಿಂದೊಮ್ಮೆ, 'ನಾನು ಒಲಿದರೆ ನಾರಿ, ಮುನಿದರೆ ಮಾರಿ' ಅಂತ ಅವಳೇ ಹೇಳಿದ್ದಳು. ಮೊನ್ನೆ ಮುನಿದಳು. ಅದಕ್ಕೆ ಮಾರಿಬಿಟ್ಟೆ

ಸಂಗ್ರಹ: ಮನೋಜ್ ಕುಮಾರ್ ಕೆ.,
ಬೆಂಗಳೂರು


